

ಅವರಿಗೆ ಈ ತಿಳಿವಳಿಕೆ ಎಷ್ಟರ ಮಟ್ಟಿಗೆ ಇದೆ ಎಂದು ನೇರವಾಗಿ ತಿಳಿದುಕೊಳ್ಳಲು ಬರುವುದಿಲ್ಲ. ಅಥವಾ ಅವರನ್ನು ಮಾತನಾಡಿಸಿ ಅವರಿಗೆ ಇಂತಹ ಜ್ಞಾನ ಎಷ್ಟಿದೆ ಎಂದು ಸುಲಭವಾಗಿ ತಿಳಿದುಕೊಳ್ಳಲು ಆಗುವುದಿಲ್ಲ. ಆದರೆ, ಕಲಿಕೆಯ ಮುಖ್ಯ ನೆಲೆಯೇ ಇದು.

ಕಲಿಯಲು ಬೇಕಾದ ಕಲಿಕೆಯೇ ಶಿಕ್ಷಣ ಕಲಿಸಬೇಕಾದ ಅತೀ ಮುಖ್ಯ ಮಾನಸಿಕತೆ. ಆನ್‌ಲೈನ್ ಶಿಕ್ಷಣದಲ್ಲಿ ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತಿದೆ ಎನ್ನುವುದು ನಂತರದ ವಿಚಾರ. ಅದಕ್ಕೂ ಮೊದಲು, ನಮ್ಮ ಶಾಲಾ ಕಾಲೇಜುಗಳ ಸಾಧಾರಣ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಇದು ಆಗುತ್ತಿದೆ ಎನ್ನುವುದನ್ನೂ ಗಮನಿಸಬೇಕು. ಶಾಲಾ ಕಾಲೇಜುಗಳಲ್ಲಿ ಸಂಪನ್ಮೂಲಗಳ ಕೊರತೆ ಇದ್ದರೂ, ಗ್ರಂಥಾಲಯಗಳು ಇಲ್ಲದಿದ್ದರೂ, ಅಥವಾ ಇನ್ನಾವುದೇ ಕೊರತೆ ಇದ್ದರೂ ನಡೆದೀತು. ಆದರೆ, ವಿದ್ಯಾರ್ಥಿಗಳಲ್ಲಿ ಕಲಿಯುವುದರ ಕುರಿತ ಕಲಿಕೆಯ ಸಾಧ್ಯತೆ ಮೂಡದಿದ್ದರೆ, ಮಿಕ್ಕ ಯಾವ ಸಂಪನ್ಮೂಲಗಳಿದ್ದರೂ ಅದರ ಉಪಯೋಗ ಅಷ್ಟಕ್ಕಷ್ಟೆ. ಕಲಿಯುವುದರ ಕುರಿತ ಕಲಿಕೆಯನ್ನು ಹೇಳಿಕೊಡುವುದು ಎಂದರೆ ಮಿಕ್ಕ ಎಲ್ಲಾ ವಿಚಾರಗಳನ್ನು ಪಾಠ ಮಾಡಿದ ನಂತರ, ಇನ್ನೊಂದು ಗಂಟೆ ಕಲಿಕೆಯ ಕುರಿತ ಕಲಿಕೆಯ ಪಾಠ ಮಾಡುವುದು ಎಂದಲ್ಲ. ಅದು ಮಿಕ್ಕ ವಿಚಾರಗಳಂತೆ ಕಲಿಯಬಹುದಾದ ಇನ್ನೊಂದು ವಿಚಾರವಲ್ಲ. ನಾವು ಕಲಿಯುವ ವಿಚಾರಗಳನ್ನ ಹೇಗೆ ಕಲಿಯುತ್ತೇವೆ ಎನ್ನುವುದರ ಮೇಲೆ ಈ ಮೆಟಾ ಲರ್ನಿಂಗ್‌ನ ಕ್ಷಮತೆ ನಮಗೆ ಬರುತ್ತದೆ. ಉದಾಹರಣೆಗೆ, ಒಳ್ಳೆಯ ಬಸ್ ಚಾಲಕರು ಮತ್ತು ಕೆಟ್ಟ ಚಾಲಕರ ನಡುವಿನ ವ್ಯತ್ಯಾಸದಂತೆ. ಒಳ್ಳೆಯ ಚಾಲಕರಾದವರು ಮೊದಲು ಬಸ್ ಚಾಲನೆಯನ್ನು ಕಲಿತು ಆಮೇಲೆ ಒಳ್ಳೆಯ ಚಾಲನೆ

